**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ 360/2022**

ಪಿಡಬ್ಲ್ಯು- 1

**Proclamation published police**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಖಾದರ್ ಎಂ |
| ತಂದೆಯ ಹೆಸರು | ಃ | ಮೊಹಮದ್ |
| ವಯಸ್ಸು | ಃ | 53 ವರ್ಷ |
| ವೃತ್ತಿ | ಃ | ಪೊಲೀಸ್ ಮುಖ್ಯ ಪೇದೆ ವಿರಾಜಪೇಟೆ ನಗರ ಪೋಲಿಸ್ ಠಾಣೆ |
| ವಾಸಸ್ಥಳ | ಃ | ವಿರಾಜಪೇಟೆ ನಗರ |

**ದಿನಾಂಕ ಃ 24-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ**

1. ನಾನು ದಿನಾಂಕ 19-08-2021 ರಿಂದ ಇಲ್ಲಿಯವರೆಗೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 11-08-2022 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ, ಉದ್ಘೋಷಣ ಪ್ರತಿಯನ್ನು ಹೊಂದಿಕೊಂಡು ರಾಜಸ್ಥಾನ ರಾಜ್ಯದ ಜಾಲೂರು ಜಿಲ್ಲೆಯ ಶಾಹಿರ ತಾಲ್ಲೂಕುಗೆ ಹೋಗಿ 2ನೇ ಆರೋಪಿಯ ಇರುವಿಕೆ ಬಗ್ಗೆ ವಿಚಾರಿಸಿದಾಗ ಸುಮಾರು ವರ್ಷಗಳಿಂದಲೂ ಆತ ಎಲ್ಲಿರುತ್ತಾನೆ ಎಂದು ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಅಲ್ಲಿಗೆ ಪಂಚಾಯಿತಿದಾರರನ್ನು ಬರಮಾಡಿಕೊಂಡು, ಅವರಿಗೆ ನ್ಯಾಯಾಲಯದ ಆದೇಶದ ಪ್ರತಿಯನ್ನು ತೋರಿಸಿ, ಪ್ರಕರಣದ ಸಾರಾಂಶವನ್ನು ತಿಳಿಸಿ, ಈ ಪ್ರಕರಣದ ಸಂಬಂಧ ಪಂಚಾಯಿತಿದಾರರಾಗಬೇಕೆಂದು ಕೋರಿಕೊಂಡಾಗ, ಅದಕ್ಕೆ ಅವರು ಒಪ್ಪಿರುತ್ತಾರೆ. ನಂತರ ಪಂಚರಾದ ಭಗತ್ ಸಿಂಗ್ ರವರ ಸಮಕ್ಷಮ ಉದ್ಘೋಷಣ ಪ್ರಕಟಣಾ ಮಹಜರ ಕ್ರಮ ಜರುಗಿಸಿ, 2ನೇ ಆರೋಪಿಯ ಬಗ್ಗೆ ತಿಳಿದು ಬಂದಲ್ಲಿ ನಮ್ಮ ಪೋಲಿಸ್ ಠಾಣೆಗೆ ತಿಳಿಸುವಂತೆ ಸೂಚಿಸಲಾಯಿತು, ನಂತರ ಉದ್ಘೋಷಣ ಪ್ರಕಟಣಾ ಪ್ರತಿಯನ್ನು ರಾಜಸ್ಥಾನ ರಾಜ್ಯದ ಜಾಲೂರು ಜಿಲ್ಲೆಯ ಶಾಹಿರ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯ ನೋಟಿಸ್ ಬೋರ್ಡ್ ಗೆ ಅಂಟಿಸಲಾಯಿತು. ಸದರಿ ಮಹಜರನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಜರುಗಿಸಿರುತ್ತೇನೆ.

ನಂತರ ಠಾಣೆಗೆ ಹಿಂತಿರುಗಿ ನಮ್ಮ ಪಿಎಸ್ಐ ರವರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ಉದ್ಘೋಷಣೆ ಪ್ರಕಟಣೆ ಮಹಜರನ್ನು ನಿಪಿ1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1 ಎ ಗುರುತಿಸಲಾಯಿತು. ರಾಜಸ್ಥಾನ ರಾಜ್ಯದ ಜಾಲೂರು ಜಿಲ್ಲೆಯ ಶಾಹಿರ ತಾಲ್ಲೂಕು ಕಛೇರಿಯವರು ನೀಡಿರುವ ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದನ್ನು ನಿಪಿ2 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ )
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.